ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/01/ಸಿಎಎಸ್/2020-21/ಬಸ್ಥಾವಿ ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು, ದಿನಾಂಕ: 27.10.2023

## ಸುತ್ತೋಲೆ

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು / ಗ್ರಂಥಪಾಲಕರು / ದೈಹಿಕ ಶಿಕ್ಷಣ ನಿರ್ದೇಶಕರಿಗೆ ವೃತ್ತಿ ಪದೋನ್ನತಿ (CAS) ನಿಯಮಗಳನ್ವಯ ವಿವಿಧ ಶೈಕ್ಷಣಿಕ ಹಂತಗಳನ್ನು ಮಂಜೂರು ಮಾಡುವ ಬಗ್ಗೆ.

ಉಲ್ಲೇಖ : 1. ದಿನಾಂಕ: 18-07-2018 ರ ಯುಜಿಸಿ ಮಾರ್ಗಸೂಚಿಗಳು ಮತ್ತು ಪೂರಕವಾಗಿ ಹೊರಡಿಸಲಾಗಿರುವ ತಿದ್ದುಪಡಿ ಆದೇಶಗಳು

2. ಸರ್ಕಾರದ ದಿನಾಂಕ : 02.03.2021ರ ಸಂಖ್ಯೆ : ಇಡಿ/123/ಡಿಸಿಇ/ 2020ರ ಆದೇಶ.
3. ಈ ಕಛೇರಿಯ ದಿನಾಂಕ : 16.03.2021ರ ಸಮಸಂಖ್ಯೆಯ ಪರಿಚಲನಾ ಆದೇಶ.
4. ಈ ಕಛೇರಿಯ ದಿನಾಂಕ:13.08.2021 ರ ಸುತ್ತೋಲೆ
5. ಈ ಕಛೇರಿಯ ದಿನಾಂಕ 29.12.2021ರ ಸುತ್ತೋಲೆ

** ** **

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರಿಗೆ ಉಲ್ಲೇಖ (01) ರಲ್ಲಿ ಸೂಚಿಸಿರುವಂತೆ ಸಿ.ಎ.ಎಸ್ ಅಡಿಯಲ್ಲಿ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣಗಳನ್ನು {ಶೈಕ್ಷಣಿಕ ಹಂತ 11 (ಎಜಿಪಿ ರೂ.7000/-), ಶೈಕ್ಷಣಿಕ ಹಂತ 12 (ಎಜಿಪಿ ರೂ.8000/-), ಶೈಕ್ಷಣಿಕ ಹಂತ 13ಎ (ಎಜಿಪಿ ರೂ.9000/-), ಮತ್ತು ಶೈಕ್ಷಣಿಕ ಹಂತ 14 (ಎಜಿಪಿ ರೂ.10000/-) ಗಳನ್ನು} ಮಂಜೂರು ಮಾಡುವ ಸಲುವಾಗಿ ಕಾಲೇಜುಗಳಿಂದ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವಂತೆ ಉಲ್ಲೇಖ (4) ಹಾಗೂ (5)ರ ಸುತ್ತೋಲೆಗಳಲ್ಲಿ ತಿಳಿಸಲಾಗಿತ್ತು. ಸದರಿ ಸುತ್ತೋಲೆಗಳಲ್ಲಿ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವ ಸಂಬಂಧ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು ಪಾಲಿಸಬೇಕಾದ ಕ್ರಮಗಳ ಬಗ್ಗೆ ವಿವರವಾದ ಸೂಚನೆಗಳನ್ನು ನೀಡಲಾಗಿದೆ ಹಾಗೂ ಉಲ್ಲೇಖ(1)ರಲ್ಲಿ ಸಮಗ್ರ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿರುತ್ತದೆ ಅದರಂತೆ ಕ್ರಮವಹಿಸಲು ಪ್ರಾಂಶುಪಾಲರಿಗೆ ಉಲ್ಲೇಖಿತ (2) ರ ಪರಿಚಲನಾ ಆದೇಶದ ಮೂಲಕ ತಿಳಿಸಿದ ನಂತರವೂ ಕೆಲವು ಕಾಲೇಜುಗಳಿಂದ ಸ್ವೀಕೃತವಾಗುತ್ತಿರುವ ಪ್ರಸ್ತಾವನೆಗಳು ಅಪೂರ್ಣವಿವರಗಳೊಂದಿಗೆ ಕೂಡಿದ್ದು, ತಪ್ಪಾದ ಮಾಹಿತಿ, ತಿದ್ದುಪಡಿ ಕೋರಿ ಪ್ರಸ್ತಾವನೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗುತ್ತಿವೆ ಹಾಗೂ ಮತ್ತೆ ಕೆಲವು ಪ್ರಸ್ತಾವನೆಗಳನ್ನು ಶೈಕ್ಷಣಿಕ ಹಂತಕ್ಕೆ ನಿಗಧಿ ಪಡಿಸಿರುವ ಅರ್ಹತೆ/ಮಾನದಂಡಗಳನ್ನು ಪೂರೈಸುವ ದಿನಾಂಕದ ಮುನ್ನವೇ ಹಲವು ಕಾಲೇಜುಗಳ ಪ್ರಾಂಶುಪಾಲರ ಮುಖಾಂತರ ಈ ಕಛೇರಿಗೆ ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಾಂಶುಪಾಲರ ಹಂತದ ಆಯ್ಕೆ ಸಮಿತಿಯು ಇನ್ನು ಮುಂದೆ ಶೈಕ್ಷಣಿಕ ಹಂತದ ಮಂಜೂರಾತಿಗಾಗಿ ಕಳುಹಿಸಿಕೊಡುವ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿಕೊಡುವ ಪೂರ್ವದಲ್ಲಿ ಸಂಬಂಧಿಸಿದ ನೌಕರರ ಸೇವಾ ಪುಸ್ತಕಗಳನ್ನು ತಪ್ಪದೇ ಕೂಲಂಕಷವಾಗಿ ಪರಿಶೀಲಿಸಿ ಮುಖ್ಯವಾಗಿ ಸೇವಾ ವಹಿಯಲ್ಲಿ ನಮೂದಿಸಿರುವಂತೆಯೇ ಹೆಸರನ್ನು ಪ್ರಸ್ತಾವನೆಯಲ್ಲಿ ದಾಖಲಿಸುವುದು, M.Phil./Ph.D ಮೇಲೆ ಸೇವಾ ವಿನಾಯಿತಿ ಕೋರಿರುವ ಪ್ರಸ್ತಾವನೆಗಳನ್ನು ನಿಗದಿತ ಸಮಯದಲ್ಲಿ ಪೂರೈಸಿರುವ ಬಗ್ಗೆ ಮತ್ತು ವಿಶೇಷ

ಮುಂಗಡ ವೇತನ ಬಡ್ತಿಗಳನ್ನು ಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಗೊಂಡ ಉಪನ್ಯಾಸಕರಿಗೆ ಯು.ಜಿ.ಸಿ. ವೇತನ ಶ್ರೇಣಿಯನ್ನು ವಿಸ್ತರಿಸಿರುವ ಆದೇಶದ ಪ್ರತಿ/ಸೇವಾ ಪುಸ್ತಕದಲ್ಲಿ ದಾಖಲಿಸಿರುವ ಪುಟದ ಪ್ರತಿಯನ್ನು ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಕಳುಹಿಸಿಕೊಡುವಂತೆ ಹಾಗೂ ಕೆಳಕಂಡ ಸೂಚನೆಗಳನ್ವಯ ಕ್ರಮವಹಿಸಲು ಸೂಚಿಸಲಾಗಿದೆ.

FDP/FIP ಯೋಜನೆ ಅಡಿಯಲ್ಲಿ ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕಾಗಿ ತೆರಳಿದ್ದು ಸದರಿ ಅವಧಿಯನ್ನು ಕಾರಣಾಂತರಗಳಿಂದ ವಿಸ್ತರಿಸಿದ್ದಲ್ಲಿ ವಿಸ್ತರಣಾ ಅವಧಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಶೈಕ್ಷಣಿಕ ಹಂತದ ಮಂಜೂರಾತಿಗಾಗಿ ಸಲ್ಲಿಸುವ ಪ್ರಸ್ತಾವನೆಗಳಲ್ಲಿ ಕಡ್ಡಾಯವಾಗಿ ಪ್ರಾಂಶುಪಾಲರು ನಮೂದಿಸತಕ್ಕದ್ದು ಹಾಗೂ ಸದರಿ ವಿಸ್ತರಣಾ (Extension Period) ಅವಧಿಯನ್ನು ಮುಂದೂಡಿ ಅರ್ಹತಾ ದಿನಾಂಕವನ್ನು ನಮೂದಿಸತಕ್ಕದ್ದು.

### A. ಶೈಕ್ಷಣಿಕ ಹಂತ 10 ರಿಂದ 11 (ರೂ. 7000/- ಎ.ಜಿ.ಪಿ) ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಪ್ರಸ್ತಾವನೆಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳು

1. ಉಲ್ಲೇಖ (2) ರ ಆದೇಶ ಮತ್ತು (3)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು / ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಎ ನ ಫಾರಂ ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಮಾನುಸಾರ ಪರಿಶೀಲಿಸುವುದು, ಪರಿಶೀಲಿಸಿದ ಪ್ರಸ್ತಾವನೆಗಳನ್ನು ಶೈಕ್ಷಣಿಕ ಹಂತ 11 ಕ್ಕೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ಕರ್ನಾಟಕ ಲೋಕ ಸೇವಾ ಆಯೋಗ/ ಕರ್ನಾಟಕ ಪರೀಕ್ಷಾ ಮಂಡಳಿ ಪ್ರಾಧಿಕಾರದ ನೇಮಕಾತಿ ಆದೇಶದ ಪ್ರತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಗಳು.
3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಹಾಗೂ ಪಿಹೆಚ್‌ಡಿ ನೊಂದಣಿ ಪತ್ರ (PhD Registration Copy) Course work ಅಂಕಪಟ್ಟಿ, ಅಧಿಸೂಚನೆ ಪ್ರತಿ (Notification Copy) ಘಟಿಕೋತ್ಸವ ಪ್ರಮಾಣಪತ್ರ (Convocation Certificate) ಇತ್ಯಾದಿ ಎಲ್ಲಾ ಪ್ರಮಾಣ ಪತ್ರಗಳನ್ನು ಪ್ರಾಂಶುಪಾಲರು ದೃಢೀಕರಿಸುವುದು.
4. ಪ್ರಾಂಶುಪಾಲರಿಂದ ದೃಢೀಕರಿಸಿದ ಓ.ಸಿ/ಆರ್.ಸಿ. ಪೂರೈಸಿದ ಪ್ರಮಾಣ ಪತ್ರದ ಪ್ರತಿಗಳು.
5. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಣ.
6. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿರುವ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರ.
7. ವೇತನ ರಹಿತ ರಜೆ, ಅಸಾಧಾರಣ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.
8. ಸಹಾಯಕ ಪ್ರಾಧ್ಯಾಪಕರು Appendix II, Table -1, ನಲ್ಲಿ ತಿಳಿಸಿರುವಂತೆ Form A ನಲ್ಲಿನ Part-B, Activity I and II ನಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
9. ದೈಹಿಕ ಶಿಕ್ಷಣ ನಿರ್ದೇಶಕರು Appendix II, Table -V, ನಲ್ಲಿ ತಿಳಿಸಿರುವಂತೆ Form C ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ

ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.

10. ಗ್ರಂಥಪಾಲಕರು Appendix II, Table-4 ನಲ್ಲಿ ತಿಳಿಸಿರುವಂತೆ Form D ನಲ್ಲಿನ Part-B, Activity 1,2,3,4ಮತ್ತು 5ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activities)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
11. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪ್ರಮಾಣ ಪತ್ರದ ಪ್ರತಿಯನ್ನು ದೃಢೀಕರಿಸಿ ಲಗತ್ತಿಸುವುದು.

ಉಳಿದಂತೆ ಉಲ್ಲೇಖ (1) ರಿಂದ (5)ರ ಸರ್ಕಾರಿ ಆದೇಶ ಯುಜಿಸಿ ಮಾರ್ಗಸೂಚಿ/ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

**B. <u>ಶೈಕ್ಷಣಿಕ ಹಂತ 11 ರಿಂದ 12 (ರೂ. 8000/- ಎ.ಜಿ.ಪಿ) ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಪ್ರಸ್ತಾವನೆಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳು</u>**

1. ಉಲ್ಲೇಖ (2)ರ ಆದೇಶ ಮತ್ತು (3)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಆಯ್ಕೆ-ಎ ನ ಫಾರಂ ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು. ಪರಿಶೀಲಿಸಿದ ಪ್ರಸ್ತಾವನೆಗಳನ್ನು ಶೈಕ್ಷಣಿಕ ಹಂತ 12 ಕ್ಕೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ಕರ್ನಾಟಕ ಲೋಕ ಸೇವ ಆಯೋಗ/ ಕರ್ನಾಟಕ ಪರೀಕ್ಷಾ ಮಂಡಳಿ ಪ್ರಾಧಿಕಾರದ ನೇಮಕಾತಿ ಆದೇಶದ ಪ್ರತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಗಳು.
3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಹಾಗೂ ಪಿಹೆಚ್‌ಡಿ ನೊಂದಣಿ ಪತ್ರ (PhD Registration Copy) Course work ಅಂಕಪಟ್ಟಿ, ಅಧಿಸೂಚನೆ ಪ್ರತಿ (Notification Copy) ಘಟಿಕೋತ್ಸವ ಪ್ರಮಾಣಪತ್ರ (Convocation Certificate) ಇತ್ಯಾದಿ ಎಲ್ಲಾ ಪ್ರಮಾಣ ಪತ್ರಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಲ್ಲಿಸುವುದು.
4. ಶೈಕ್ಷಣಿಕ ಹಂತ 11 ರ ನಂತರ ಪೂರೈಸಿರುವ ಆರ್‌ಸಿ/ಎಫ್‌ಡಿಪಿ/ಎಸ್‌ಟಿಸಿ ಕೋರ್ಸುಗಳ ಪ್ರಮಾಣ ಪತ್ರಗಳ ಪ್ರತಿಯನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಲ್ಲಿಸುವುದು.
5. ಶೈಕ್ಷಣಿಕ ಹಂತ 11 ರ (ರೂ.7000/- ಎ.ಜಿ.ಪಿ) ಮಂಜೂರಾತಿ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು.
6. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ದೃಢೀಕರಣ.
7. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿರುವ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರ.
8. ವೇತನ ರಹಿತ ರಜೆ, ಅಸಾಧಾರಣೆ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.

9. ಸಹಾಯಕ ಪ್ರಾಧ್ಯಾಪಕರು Appendix II, Table -1, ನಲ್ಲಿ ತಿಳಿಸಿರುವಂತೆ Form A ನಲ್ಲಿನ Part-B, Activity 1 and 2 ನಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activities)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
10. ದೈಹಿಕ ಶಿಕ್ಷಣ ನಿರ್ದೇಶಕರು Appendix II, Table -V, ನಲ್ಲಿ ತಿಳಿಸಿರುವಂತೆ Form C ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
11. ಗ್ರಂಥಪಾಲಕರು Appendix II, Table-4 ನಲ್ಲಿ ತಿಳಿಸಿರುವಂತೆ Form D ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activities)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
12. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪ್ರಮಾಣ ಪತ್ರದ ಪ್ರತಿಯನ್ನು ದೃಢೀಕರಿಸಿ ಲಗತ್ತಿಸುವುದು.

ಉಳಿದಂತೆ ಉಲ್ಲೇಖ (1) ರಿಂದ (5)ರ ಸರ್ಕಾರಿ ಆದೇಶ ಯುಜಿಸಿ ಮಾರ್ಗಸೂಚಿ/ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

### C. <u>ಶೈಕ್ಷಣಿಕ ಹಂತ 12 ರಿಂದ 13ಎ (ರೂ. 9000/- ಎ.ಜಿ.ಪಿ) (ಸಹ ಪ್ರಾಧ್ಯಾಪಕರು) ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಪ್ರಸ್ತಾವನೆಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳು</u>

1. ಉಲ್ಲೇಖ (2)ರ ಆದೇಶ ಮತ್ತು (3)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ಅರ್ಹತೆ ಹೊಂದಿರುವ ಸಹಾಯಕ ಪ್ರಾಧ್ಯಾಪಕರು ಇವರಿಂದ ಅಯ್ಕೆ-ಎ ನ ಫಾರಂ ಎ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು. ಪರಿಶೀಲಿಸಿದ ಪ್ರಸ್ತಾವನೆಗಳನ್ನು ಶೈಕ್ಷಣಿಕ ಹಂತ 13ಎ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ. ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ನೇಮಕಾತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿ.
3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಹಾಗೂ ಪಿಹೆಚ್‌ಡಿ ನೊಂದಣಿ ಪತ್ರ (PhD Registration Copy) Course work ಅಂಕಪಟ್ಟಿ, ಅಧಿಸೂಚನೆ ಪ್ರತಿ (Notification Copy) ಘಟಿಕೋತ್ಸವ ಪ್ರಮಾಣಪತ್ರ (Convocation Certificate) ಇತ್ಯಾದಿ ಎಲ್ಲಾ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.
4. ಶೈಕ್ಷಣಿಕ ಹಂತ 11 (ರೂ.7000/- ಎಜಿಪಿ) ಹಾಗೂ ಶೈಕ್ಷಣಿಕ ಹಂತ 12 (ರೂ.8000/- ಎ.ಜಿ.ಪಿ) ಮಂಜೂರು ಮಾಡಲಾಗಿರುವ ಆದೇಶದ ಪ್ರತಿಗಳು.
5. ಶೈಕ್ಷಣಿಕ ಹಂತ 12 (ರೂ.8000 ಎಜಿಪಿ) ಮಂಜೂರಾದ ನಂತರ ಪೂರೈಸಿರುವ ತರಬೇತಿಗಳ ಬಗ್ಗೆ ಪ್ರತಿ.
6. ಪ್ರಕಟಿಸಿರುವ ಸಂಶೋಧನಾ ಲೇಖನಗಳ ಬಗ್ಗೆ ನಮೂದಿಸಿರುವ ISSN ಸಂಖ್ಯೆಯನ್ನು ಪ್ರಾಂಶುಪಾಲರ ಹಂತದಲ್ಲಿ ಪರಿಶೀಲಿಸಿ, ದೃಢೀಕರಿಸಿದ ಪ್ರತಿಗಳು.

7. ಸಹಾಯಕ ಪ್ರಾಧ್ಯಾಪಕರು Appendix II, Table -1, ನಲ್ಲಿ ತಿಳಿಸಿರುವಂತೆ Form A ನಲ್ಲಿನ Part-B, Activity I and II ನಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
8. ದೈಹಿಕ ಶಿಕ್ಷಣ ನಿದೇಶಕರು Appendix II, Table -V, ನಲ್ಲಿ ತಿಳಿಸಿರುವಂತೆ Form C ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
9. ಗ್ರಂಥಪಾಲಕರು Appendix II, Table-4 ನಲ್ಲಿ ತಿಳಿಸಿರುವಂತೆ Form D ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activities)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
10. ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರಿಗೆ ನೀಡಲಾಗಿರುವ ಗ್ರೇಡಿಂಗ್‌ಗಳನ್ನೊಳಗೊಂಡ "Screening-cum-Evaluation Committee" ಸಭೆಯ ನಡವಳಿ ಪ್ರತಿ.
11. ಮೇಲ್ಕಂಡ ಎಲ್ಲಾ ದಾಖಲೆಗಳ ಒಂದು ಸೆಟ್ ಪ್ರತಿಯನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಂದರ್ಶನದ ವೇಳೆ ಸಲ್ಲಿಸತಕ್ಕದ್ದು.
12. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿ.
13. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿರುವ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರಗಳು.
14. ವೇತನ ರಹಿತ ರಜೆ, ಅಸಾಧಾರಣೆ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.
15. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪ್ರಮಾಣ ಪತ್ರದ ಪ್ರತಿಯನ್ನು ದೃಢೀಕರಿಸಿ ಲಗತ್ತಿಸುವುದು.

ಉಳಿದಂತೆ ಉಲ್ಲೇಖ (1) ರಿಂದ (5)ರ ಸರ್ಕಾರಿ ಆದೇಶ ಯುಜಿಸಿ ಮಾರ್ಗಸೂಚಿ/ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

**D.** ಶೈಕ್ಷಣಿಕ ಹಂತ 13ಎ ಇಂದ 14 (ರೂ. 10000/– ಎ.ಜಿ.ಪಿ) (ಪ್ರಾಧ್ಯಾಪಕರು) ಮಂಜೂರಾತಿಯ ಸಂಬಂಧ ಪ್ರಾಂಶುಪಾಲರು ವಹಿಸಬೇಕಾಗಿರುವ ಕ್ರಮಗಳು ಹಾಗೂ ಪ್ರಸ್ತಾವನೆಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ದಾಖಲೆಗಳು

1. ಉಲ್ಲೇಖ (2)ರ ಆದೇಶ ಮತ್ತು (3)ರ ಪರಿಚಲನಾ ಆದೇಶದ ಮಾರ್ಗಸೂಚಿಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ಅರ್ಹತೆ ಹೊಂದಿರುವ ಸಹ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು /ಗ್ರಂಥಪಾಲಕರು ಇವರಿಂದ ಅಯ್ಕೆ–ಎ ಫಾರಂ ಬಿ ನಮೂನೆಯಲ್ಲಿ ಪ್ರಸ್ತಾವನೆಗಳನ್ನು ಪಡೆದು ಕಾಲೇಜು ಹಂತದ ಸಮಿತಿಯು ನಿಯಾಮಾನುಸಾರ ಪರಿಶೀಲಿಸುವುದು, ಪರಿಶೀಲಿಸಿದ ಪ್ರಸ್ತಾವನೆಗಳನ್ನು ಎಜಿಪಿಗೆ ಅರ್ಹತೆ ಹೊಂದುವ ದಿನಾಂಕದವರೆಗೆ ಕಾಲೇಜಿನ IQAC ಸಮಿತಿಯ ಸುಪರ್ದಿಯಲ್ಲಿರಿಸಿ, ಅರ್ಹತಾ ದಿನಾಂಕ ಪೂರೈಸಿದ ನಂತರವೇ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಪ್ರಾಂಶುಪಾಲರಿಂದ ದೃಢೀಕರಿಸಿದ ನೇಮಕಾತಿ ಹಾಗೂ ಸೇವಾ ಪೂರ್ವ ಅವಧಿ ಘೋಷಣೆಯ ಆದೇಶದ ಪ್ರತಿಗಳು.

3. ಎಂ.ಫಿಲ್/ಪಿಹೆಚ್.ಡಿ./ಎಸ್.ಎಲ್.ಇ.ಟಿ./ನೆಟ್/ಕೆ-ಸೆಟ್ ಹಾಗೂ ತತ್ಸಮಾನ ವಿದ್ಯಾರ್ಹತೆ ಪಡೆದ ಬಗ್ಗೆ ಹಾಗೂ ಪಿಹೆಚ್‌ಡಿ ನೊಂದಣಿ ಪತ್ರ (PhD Registration Copy) Course work ಅಂಕಪಟ್ಟಿ. ಅಧಿಸೂಚನೆ ಪ್ರತಿ (Notification Copy) ಘಟಿಕೋತ್ಸವ ಪ್ರಮಾಣಪತ್ರ (Convocation Certificate) ಇತ್ಯಾದಿ ಎಲ್ಲಾ ಪ್ರಮಾಣ ಪತ್ರಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಲ್ಲಿಸುವುದು.
4. ಶೈಕ್ಷಣಿಕ ಹಂತ 11 (ರೂ.7000/-) ಶೈಕ್ಷಣಿಕ ಹಂತ 12 (ರೂ.8000/-) ಹಾಗೂ ಶೈಕ್ಷಣಿಕ ಹಂತ 13ಎ (ರೂ.9000/- ಎ.ಜಿ.ಪಿ) ಮಂಜೂರು ಮಾಡಲಾಗಿರುವ ಆದೇಶದ ಪ್ರತಿಗಳು.
5. ಪ್ರಕಟಿಸಿರುವ ಸಂಶೋಧನಾ ಲೇಖನಗಳ ಬಗ್ಗೆ ನಮೂದಿಸಿರುವ ISSN ಸಂಖ್ಯೆಯನ್ನು ಪ್ರಾಂಶುಪಾಲರ ಹಂತದಲ್ಲಿ ಪರಿಶೀಲಿಸಿ, ದೃಢೀಕರಿಸಿದ ಪ್ರತಿಗಳನ್ನು ಪ್ರಸ್ತಾವನೆಯೊಂದಿಗೆ ಕಳುಹಿಸುವುದು.
6. ಪ್ರಕಟಿಸಿರುವ 10 ಸಂಶೋಧನಾ ಲೇಖನಗಳ ಪೈಕಿ ದಿನಾಂಕ: 14-06-2019 ರ ನಂತರ ಯಾವುದಾದರೂ ಲೇಖನಾ ಪ್ರಕಟಗೊಳಿಸಿದ್ದಲ್ಲಿ ಸದರಿ ಲೇಖನವು ಯುಜಿಸಿ ನಿಗಧಿಪಡಿಸಿರುವ Care List 01 ಮತ್ತು 02 ರಲ್ಲಿ ನಮೂದಿಸಿರುವ Journal ಗಳಲ್ಲಿ ಪ್ರಕಟಗೊಂಡಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು. ದಿನಾಂಕ: 14-06-2019 ರ ಯುಜಿಸಿ ಸೂಚನಾ ಪತ್ರದಲ್ಲಿ ತಿಳಿಸಿರುವಂತೆ ಯುಜಿಸಿ ಕೇರ್-ಲಿಸ್ಟೆಡ್ ಜರ್ನಲ್ಸ್‌ನಲ್ಲಿ ಪ್ರಕಟಿಸಿರುವ ಲೇಖನಗಳನ್ನು ಪ್ರಾಂಶುಪಾಲರಿಂದ ದೃಢೀಕರಿಸಿದ ಸಲ್ಲಿಸತಕ್ಕದ್ದು. ಪ್ರಸ್ತಾವನೆಯೊಂದಿಗೆ ಸಲ್ಲಿಸುವ ಸಂಶೋಧನ ಲೇಖನಗಳನ್ನು ಆನ್-ಲೈನ್‌ನಲ್ಲಿ ಪ್ರಕಟಿಸಿದ್ದಲ್ಲಿ ಅಂತಹ ಲೇಖನಗಳ ವೆಬ್-ಸೈಟ್-ಲಿಂಕ್/ಯುಆರ್‌ಎಲ್/ಡಿಒಐ ಲಿಂಕ್‌ನ್ನು ಪ್ರಸ್ತಾವನೆಯೊಂದಿಗೆ ಲಗತ್ತಿಸುವುದು. ಯುಜಿಸಿ ನಿಗಧಿಪಡಿಸಿರುವ ಕೇರ್‌ಲಿಸ್ಟ್ ಪಟ್ಟಿಯಲ್ಲಿ ಲಭ್ಯವಿರುವ ಜರ್ನಲ್‌ಗಳ ತದ್ರೂಪು- (Cloned Journals) ಜರ್ನಲ್‌ಗಳು ಚಾಲ್ತಿಯಲ್ಲಿದ್ದು ಸದರಿ ಜರ್ನಲ್‌ಗಳಲ್ಲಿ ಪ್ರಕಟವಾಗಿದ್ದಲ್ಲಿ ಅಂತಹ ಲೇಖನಗಳನ್ನು ನಿಯಮಾನುಸಾರ ಪರಿಗಣಿಸಲು ಅವಕಾಶವಿರುವುದಿಲ್ಲ.
7. ಸಹ ಪ್ರಾಧ್ಯಾಪಕರು/ ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರಿಗೆ ನೀಡಲಾಗಿರುವ ಗ್ರೇಡಿಂಗ್‌ಗಳನ್ನೊಳಗೊಂಡ "Screening-cum-Evaluation Committee" ಸಭೆಯ ನಡವಳ ಪ್ರತಿ.
8. ಸಹ ಪ್ರಾಧ್ಯಾಪಕರು Appendix II, Table -I and II, ನಲ್ಲಿ ತಿಳಿಸಿರುವಂತೆ Form B, Part-B, Activity I and II ನಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ ಸಂಬಂಧಿಸಿದಂತೆ ಗ್ರೇಡಿಂಗ್ ನಮೂದಿಸಿ. Appendix II, Table-2 ರಲ್ಲಿ ತಿಳಿಸಿರುವಂತೆ ಕಾಲೇಜು ಹಂತದ ಸಮಿತಿಯಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಅಂಕಗಳನ್ನು ನಮೂದಿಸಿ ಪೂರಕ ದಾಖಲೆಗಳು.
9. ದೈಹಿಕ ಶಿಕ್ಷಣ ನಿದೇಶಕರು Appendix II, Table -V, ನಲ್ಲಿ ತಿಳಿಸಿರುವಂತೆ Form C ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activites)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
10. ಗ್ರಂಥಪಾಲಕರು Appendix II, Table-4 ನಲ್ಲಿ ತಿಳಿಸಿರುವಂತೆ Form D ನಲ್ಲಿನ Part-B, Activity 1,2,3,4 ಮತ್ತು 5 ರಲ್ಲಿ ಕ್ಲೇಮ್‌ಮಾಡಿರುವ ಚಟುವಟಿಕೆ(Activities)ಗಳಿಗೆ ಸಂಬಂಧಿಸಿದಂತೆ ಕಾಲೇಜು ಹಂತದ ಸಮಿತಿಯಲ್ಲಿ ಗ್ರೇಡಿಂಗ್ ನಮೂದಿಸಿ ಚಟುವಟಿಕೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳು.
11. ಮೇಲ್ಕಂಡ ಎಲ್ಲಾ ದಾಖಲೆಗಳ ಒಂದು ಸೆಟ್ ಪ್ರತಿಯನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಂದರ್ಶನದ ವೇಳೆ ಸಲ್ಲಿಸತಕ್ಕದ್ದು.

12. ಯಾವುದೇ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಹಾಗೂ ಅನಧಿಕೃತ ಗೈರು ಹಾಜರಿ ದಾಖಲಾಗಿರುವುದಿಲ್ಲವೆಂಬ ಬಗ್ಗೆ ಪ್ರಾಂಶುಪಾಲರಿಂದ ಪಡೆದ ಪ್ರಮಾಣ ಪತ್ರದ ಪ್ರತಿ.
13. ಎಂ.ಫಿಲ್./ಪಿಹೆಚ್.ಡಿಗಾಗಿ ಮುಂಗಡ ವೇತನ ಬಡ್ತಿ ಸೌಲಭ್ಯವನ್ನು ಪಡೆದಿರುವ ಬಗ್ಗೆ / ಪಡೆಯದಿದ್ದ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ / ಮುಚ್ಚಳಿಕೆ ಪತ್ರದ ಪ್ರತಿ.
14. ವೇತನ ರಹಿತ ರಜೆ, ಅಸಾಧಾರಣೆ ರಜೆ ಮಂಜೂರಾಗಿದ್ದಲ್ಲಿ ವಿವರ ಸಲ್ಲಿಸುವುದು.
15. ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪ್ರಮಾಣ ಪತ್ರದ ಪ್ರತಿಯನ್ನು ದೃಢೀಕರಿಸಿ ಲಗತ್ತಿಸುವುದು.

ಉಳಿದಂತೆ ಉಲ್ಲೇಖ (1) ರಿಂದ (5)ರ ಸರ್ಕಾರಿ ಆದೇಶ ಯುಜಿಸಿ ಮಾರ್ಗಸೂಚಿ/ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವ ಸೂಚನೆಗಳಂತೆ ಕ್ರಮವಹಿಸಲು ತಿಳಿಸಲಾಗಿದೆ.

ಸ್ಥಾನೀಕರಣಕ್ಕೆ ಅರ್ಹರಾಗಿದ್ದು ವಯೋನಿವೃತ್ತಿ ಹೊಂದಲಿರುವ ಬೋಧಕರ ಪ್ರಸ್ತಾವನೆಯನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಆದ್ಯತೆ ಮೇರೆಗೆ ಪರಿಶೀಲಿಸಿ 3 ತಿಂಗಳ ಮುಂಚಿತವಾಗಿ ಪ್ರಸ್ತಾವನೆಯ ಮುಖ ಪುಟದಲ್ಲಿ ನಿವೃತ್ತಿ ದಿನಾಂಕವನ್ನು ನಮೂದಿಸಿ ಕೇಂದ್ರ ಕಛೇರಿಗೆ ಕಳುಹಿಸತಕ್ಕದ್ದು.

ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಯುಜಿಸಿ ನಿಗದಿಪಡಿಸಿರುವ ಮಾನದಂಡಗಳನ್ವಯ ಅರ್ಹ ಪ್ರಸ್ತಾವನೆಗಳನ್ನು ಮುಂಬಡ್ತಿ ಸಮಿತಿಸಭೆಯ ಮುಂದೆ ಸ್ಥಾನೀಕರಣ ಮಂಜೂರಾತಿಗಾಗಿ ಪ್ರಸ್ತುತಪಡಿಸಲಾಗುವುದು. ಶೈಕ್ಷಣಿಕ ಹಂತ 13ಎ (ಸಹ ಪ್ರಾಧ್ಯಾಪಕ) ಮತ್ತು 14(ಪ್ರಾಧ್ಯಾಪಕ) ಹುದ್ದೆಯ ಸ್ಥಾನೀಕರಣಕ್ಕೆ ಸಂಬಂಧಿಸಿದಂತೆ ಇಲಾಖಾಹಂತದ ಸಂದರ್ಶನ ಪ್ರಕ್ರಿಯೆಯನ್ನು ಈ ಕೆಳಕಂಡ ವೇಳಾಪಟ್ಟಿಯನ್ವಯ ಕೈಗೊಳ್ಳಲಾಗುವುದು.

| Eligibilty Period/Submitting Period for Proposals | Screening and Scrutiny Period | Interview | Remarks |
|---|---|---|---|
| **Jan Feb Mar** | **April May** | **June** | |
| **April May June** | **July Aug** | **Sep** | |
| **July Aug Sep** | **Oct Nov** | **Dec** | |
| **Oct Nov Dec** | **Jan Feb** | **Mar** | |

**(ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

ಮುಖ್ಯ ಆಡಳಿತಾಧಿಕಾರಿಗಳು
ಕಾಲೇಜು ಶಿಕ್ಷಣ ಇಲಾಖೆ